ದಿನಾಂಕ : 09-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಹೆಚ್.ಸಿ.ಎಸ್. ವಕೀಲರವರಿಂದ ಆರೋಪಿತರ ಪರವಾಗಿ**

ನನಗೆ ಬಸವರಾಜ ದೊಡಮನಿ ಮತ್ತು ಶ್ರೀಶೈಲ ದೊಡಮನಿ ಎನ್ನುವವರು ನನ್ನ ಮಕ್ಕಳು. ನಾನು, ನನ್ನ ಮಕ್ಕಳು ಮತ್ತು ಅವರ ಸಂಸಾರದವರು ಎಲ್ಲರೂ ಈ ದಿನದವರೆಗೆ ಒಟ್ಟಿಗೆ ವಾಸವಾಗಿದ್ದೇವೆ. ನನ್ನ ಮಗ ಬಸವರಾಜ ದೊಡಮನಿ ಪಂಚಾಯಿತಿ ಸದಸ್ಯನಾಗಿದ್ದು, " ಅವನು ಕೆಲವೂ ದಿವಸಗಳಿಂದ ರಾತ್ರಿ ಊಟ ಮಾಡಿ ಹೋದವನು ಮರಳಿ ಮನಗೆ ಬೇಗ ಬರುತ್ತಿರಲಿಲ್ಲ, ಹಿಗಾಗಿ ನಾನು ಅವನ ದಾರಿ ಕಾಯದೆ ಮಲಗಿಕೊಳ್ಳುತ್ತಿದ್ದೇವು. " ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಆತನು ತಡವಾಗಿ ಮನೆಗೆ ಬರುತ್ತಿದ್ದನು ಎಂದು ಹೇಳುತ್ತಾರೆ .

2. ನನ್ನ ಮಗ ಬಸವರಾಜ ತೀರಿಕೊಂಡ ದಿನ ರಾತ್ರಿ ಊಟ ಮಾಡಿ, ರಾತ್ರಿ 10:30 ರ ಸಮಯದಲ್ಲಿ ಮನೆಯಿಂದ ಹೊರಗೆ ಹೋಗಿದ್ದನು. ಆತನು ಮೋಟಾರ ಬೈಕನ್ನು ತೆಗೆದುಕೊಂಡು ಹೋಗಿರಲಿಲ್ಲ, ಅದು ಮನೆಯಲ್ಲಿತ್ತು. ಮರು ದಿನ ಬೆಳಗ್ಗೆ ಕಿತ್ತೂರ ಪೋಲಿಸರು ನನ್ನ ಮಗ ನಮ್ಮೂರಿನ ಕರೆಮ್ಮಾ ದೇವಸ್ಥಾನದ ಹಿಂದಿನ ಭಾಗ ಬಿದ್ದಿರುತ್ತಾನೆ ಎಂದು ತಿಳಿಸಿದ್ದರು ಎನ್ನುವುದು ಸರಿ. ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ಮಗ ಬಸವರಾಜನಿಗೆ ಜೀವ ಇತ್ತು , ಗೋಪಾಲ ಪಾಗದ , ಮಹಾಂತೇಶ ಪಾಗದ ಇನ್ನೊಬ್ಬ ಹೆಣ್ಣು ಮಗಳು ಸೇರಿ ನನಗೆ ಹೊಡೆದಿರುತ್ತಾರೆ , ನನ್ನ ಜೀವ ಉಳಿಸಿ ಎಂದು ಹೇಳಿದನು. ಅವನ ಮೈ ತುಂಬಾ ಖಾರ ಬಿದ್ದಿತ್ತು ಎಂದು ಹೇಳಿದ್ದಾರೆ. ಈ ವಿಚಾರವನ್ನು ನಾನು ಪೋಲೀಸರ ಮುಂದೆ ಹೇಳಿದ್ದೇನೆ ಮತ್ತು ಪೋಲಿಸರು ಸಹ ಸ್ವತಃ ನೋಡಿದ್ದಾರೆ. ಈಗ

ಹೇಳಿದ ವಿಚಾರವನ್ನು ಮೊದಲು ಬಾರಿಗೆ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮತ್ತು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3. ನೀಲವ್ವ ಮಹಾಂತೇಶ ದೊಡಮನಿ ಎನ್ನುವವರು ನನ್ನ ಸಂಬಂಧಿಕರು ಮತ್ತು ಅವರು ನಮ್ಮ ಓಣಿಯಲ್ಲಿ ವಾಸವಾಗಿದ್ದಾರೆ. ನನ್ನ ಮಗ ಊರಿನ ಜನರಿಂದ ಮನೆ ಕಟ್ಟಿಸಿಕೊಡುತ್ತೇನೆ ಎಂದು ಹೇಳಿ ಅವರಿಂದ ಹಣವನ್ನು ಪಡೆದುಕೊಳ್ಳುತ್ತಿದ್ದನು ಎನ್ನುವುದು ಸರಿಯಲ್ಲ. ನಾನು ನನ್ನ ಮಗ ಮೃತ ಬಸವರಾಜ ಮತ್ತು ನನ್ನ ಕಿರಿಯ ಮಗ ಶ್ರೀಶೈಲ ಎಲ್ಲರೂ ನೀಲವ್ವ ಮಹಾಂತೇಶ ದೊಡಮನಿ ಇವರಿಗೆ ನಾವು ಕಟ್ಟಿಸಿ ಕೊಟ್ಟ ಮನೆಯ ಬಾಬ್ತು ಹಣ ನೀಡಿಲ್ಲ ಎಂದು ನಾವು ಆಕೆಯ ಮೇಲೆ ಹಲ್ಲೆ ಮಾಡಿದ್ದೇವೆ ಎಂದು ನೀಲವ್ವ ರವರು ಕಿತ್ತೂರ ಪೋಲಿಸ ಠಾಣೆಗೆ ದೂರು ನೀಡಿದ್ದರು ಎನ್ನುವುದಕ್ಕೆ ಸಾಕ್ಷಿಯು ನಾವು ಅವರನ್ನು ಹೊಡೆದಿಲ್ಲ , ಅವರು ಆ ರೀತಿ ಸುಳ್ಳು ದೂರು ನೀಡಿದ್ದರು ಎಂದು ಹೇಳುತ್ತಾರೆ. ನಾವು ಆ ಪ್ರಕರಣದಲ್ಲಿ ಹಾಜರಾಗುತ್ತಿದ್ದೇವು ಸರಿ. ಆ ಪ್ರಕರಣಕ್ಕೂ ಮತ್ತು ಈ ಪ್ರಕರಣಕ್ಕೂ ಸಂಬಂಧ ಇಲ್ಲ . ನಾವು ಆ ಪ್ರಕರಣದಲ್ಲಿ ಖುಲಾಸೆ ಆಗಿದ್ದೇವೆ ಎಂದು ಹೇಳುತ್ತಾರೆ.

4. ನನ್ನ ಮಗ ಜಯವಂತ ಯಲ್ಲಪ್ಪ ಪೂಜಾರಿ ಎನ್ನುವವರ ವಿರುದ್ಧ ಚುಣಾವಣೆಗೆ ಸ್ಪರ್ಧಿಸಿ ಗೆದ್ದಿದ್ದನು. ಸದರಿ ಜಯವಂತ ರವರು ನಮ್ಮ ಓಣಿಯಲ್ಲಿ ವಾಸವಾಗಿದ್ದಾರೆ . ನನ್ನ ಮಗ ಊರಿನ ಜನರಿಂದ ಮನೆ ಕಟ್ಟಿಸಿಕೊಳ್ಳುತ್ತೇನೆ ಎಂದು ಹಣ ತೆಗದುಕೊಂಡಿದ್ದರಿಂದ ಊರಿನ ಜನರು ನನ್ನ ಮಗನನ್ನು ದ್ವೇಶಿಸುತ್ತಿದ್ದರು ಮತ್ತು ಜಯವಂತ ಪೂಜಾರಿ ರವರಿಗೆ ಕೂಡಾ ದ್ವೇಷ ಇತ್ತು ಎನ್ನುವುದು ಸರಿಯಲ್ಲ.

5. ನನ್ನ ಮಗ ಬಸವರಾಜ ಮೋಟಾರ ಸೈಕಲದಲ್ಲಿ ಓಡಾಡುತ್ತಿದ್ದು ಆತನು ಮೋಟಾರ ಸೈಕಲ ಮೇಲಿಂದ ಬಿದ್ದು, ಅಪಘಾತ ಮಾಡಿಕೊಂಡಿದ್ದನು ಎನ್ನುವುದು ಸರಿಯಲ್ಲ.

6. 1 ನೇ ಆರೋಪಿ ಗೋಪಾಲ ಅಲ್ಲಲ್ಲಿ ಸೆಂಟ್ರಿಗ ಕೆಲಸ ಮಾಡಲು ಹೋಗುತ್ತಿದ್ದು , ನನ್ನ ಮಕ್ಕಳಾದ ಬಸವರಾಜ ಮತ್ತು ಶ್ರೀಶೈಲ ರವರೊಂದಿಗೆ ಸಹ ಕೆಲಸ ಮಾಡಲು ಹೋಗುತ್ತಿದ್ದನು. ಆ ರೀತಿ ಕೆಲಸ ಮಾಡುತ್ತಿದ್ದಾಗ 1ನೇ ಆರೋಪಿ ಕೂಲಿ ಹಣ ನೀಡುವ ಸಲುವಾಗಿ ನನ್ನ ಮಕ್ಕಳೊಂದಿಗೆ ತಕರಾರು ಇರಲಿಲ್ಲ. ಪೋಲಿಸರಿಗೆ ನಾನು ದೂರು ನೀಡಿರಲಿಲ್ಲ. ನಾನು ನನ್ನ ಮಗನನ್ನು ನೋಡಿದ ಕೂಡಲೇ ನನಗೆ ಗಾಬರಿ ಆಯಿತು . ಪೋಲೀಸರು ನನ್ನನ್ನು ಜೀಪನಲ್ಲಿ ಕರೆದುಕೊಂಡು ಹೋದರು.

7. ನನ್ನ ಮಗ ಬಸವರಾಜ ಮತ್ತು ಸೊಸೆ ಒಟ್ಟಿಗೆ ಇದ್ದರು. ನನ್ನ ಮಗ ತೀರಿಕೊಂಡ ದಿನ ನನ್ನ ಸೊಸೆಯ ತಾಯಿಗೆ ಕಣ್ಣು ಆಪರೇಶನ ಆಗಿದ್ದರಿಂದ, ನನ್ನ ಸೊಸೆ ಅವರನ್ನು ನೋಡಲು ಅಲ್ಲಿಗೆ ಹೋಗಿದ್ದಳು. ನನ್ನ ಮಗ ತೀರಿಕೊಂಡ ದಿನ ಕಿತ್ತೂರ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಕೇಸನಲ್ಲಿ ನಾನು ಮತ್ತು ನನ್ನ ಇಬ್ಬರು ಮಕ್ಕಳು ಹಾಜರು ಆಗಿದ್ದೇವು. ನಾನು ಮತ್ತು ನನ್ನ ಕಿರಿಯ ಮಗ ಶ್ರೀಶೈಲ ವಾಪಸ್ಸು ನಮ್ಮ ಮನೆಗೆ ಬಂದೆವು, ನನ್ನ ಮಗ ಬಸವರಾಜ ಮೋಟಾರ ಸೈಕಲನಲ್ಲಿ ತನ್ನ ಹೆಂಡತಿಯ ಮನೆಗೆ ಹೋಗಿದ್ದನು. ಕಿತ್ತೂರ ನ್ಯಾಯಾಲಯದಿಂದ ನನ್ನ ಮಗ ಹೊರಟಾಗ ಮಧ್ಯಾಹ್ನ 03.00 ಗಂಟೆ ಆಗಿತ್ತು.

8. ನನ್ನ ಮಗ ಬಸವರಾಜ ಇತನು ತೀರಿಕೊಳ್ಳುವ ಮೂರು ವರ್ಷಗಳ ಹಿಂದೆ ನಮ್ಮ ಊರ ಮಾಹಂತೇಶ ಕಲ್ಲಪ್ಪ ಪಾಗದ ಇವನ ಹೆಂಡತಿ ನಾಗವ್ವ ಪಾಗದ ಇವಳೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದರಿಂದ ಮಹಾಂತೇಶ ಪಾಗದ ಹಾಗೂ ಅವರ ಮನೆಯವರು

ಬಸವರಾಜ ಇವನೊಂದಿಗೆ ತಂಟೆ ಮಾಡಿ ಅವನ ಮೇಲೆ ಸಿಟ್ಟಾಗಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ , ಅಂತಹ ಯಾವುದೇ ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ.

9. ನನ್ನ ಮಗ ಬಸವರಾಜ ಇತನು ಮಹಾಂತೇಶ ಹಾಗೂ ಗೋಪಾಲ ಪಾಗದ ಇವರ ಹೆಂಡತಿಯರೊಂದಿಗೆ ಅಸಭ್ಯವಾಗಿ ವರ್ತಿಸಿ ಅವರೊಂದಿಗೆ ತಂಟೆ ಮಾಡಿ ವೈಮನಸ್ಸು ಬೆಳೆಸಿಕೊಂಡಿದ್ದರಿಂದ ಈ ಪ್ರಕರಣದ 3 ಜನ ಆರೋಪಿತರು ಕೂಡಿ ಸಂಚು ಮಾಡಿ ಬಸವರಾಜ ಇತನಿಗೆ ತಮ್ಮ ಮನೆಯ ಕಡೆಗೆ ದಿಃ 03.03.2020 ರಂದು ಬೆಳಗಿನ ಜಾವ 1.30 ಗಂಟೆಗೆ ಮನೆಯ ಹತ್ತಿರ ಕರೆಸಿಕೊಂಡು ಬಸವರಾಜ ಇವನಿಗೆ ಕಣ್ಣಿಗೆ ಕಾರದ ಪುಡಿ ಗೊಜ್ಜಿ ಈ ಪ್ರಕರಣದ 1 ಮತ್ತು 2ನೇ ಆರೋಪಿತರು ಸೇರಿ ಬಸವರಾಜ ಇತನಿಗೆ ಬಡಿಗೆಗಳಿಂದ ತಲೆ, ಮುಖ, ಕೈಕಾಲುಗಳಿಗೆ ಹೊಡೆದು ಬಹಳ ಗಾಯಪಡಿಸಿ ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆಂತಹ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸರಿಯಲ್ಲ.

10. ನನ್ನ ಮಗ ಬಸವರಾಜನ ಹೆಂಡತಿ ನನ್ನ ಮಗನೊಂದಿಗೆ ಜಗಳ ಮಾಡಿಕೊಂಡು ಆವಳು ತವರು ಮನೆಗೆ ಹೋಗಿದ್ದು , ಆಕೆ ಮನೆಗೆ ವಾಪಸ್ಸು ಬರಲು ಒಪ್ಪದೆ ಇರುವ ಕಾರಣ ನನ್ನ ಮಗ ನನ್ನ ಸೊಸೆಯನ್ನು ಕರೆದುಕೊಂಡು ಬರಲು ಆಕೆಯ ತವರು ಮನೆಗೆ ಹೋಗಿದ್ದನು ಎನ್ನುವುದು ಸರಿಯಲ್ಲ. ನನ್ನ ಮಗ ಬಸವರಾಜ ಮೋಟಾರ ಸೈಕಲ ಮೇಲೆ ವೇಗವಾಗಿ ಬಂದು ಅಪಘಾತ ಆಗಿದ್ದರಿಂದ ಬಿದ್ದು ಸತ್ತು ಹೋಗಿದ್ದಾನೆ ಎಂದು ಸೂಚಿಸುವುದು ಸರಿಯಲ್ಲ. ಆ ದಿನ ನನ್ನ ಮಗ ಮೋಟಾರ ಸೈಕಲ ಮೇಲೆ ಹೋಗಿರಲಿಲ್ಲ. ಮೋಟಾರ ಸೈಕಲ ಮನೆಯ ಬಳಿ ಇತ್ತು ಎಂದು ಹೇಳುತ್ತಾರೆ.

11. ನನ್ನ ಮಗ ಬಸವರಾಜನ ಮೊಬೈಲ ಪೋನನ್ನು ಪೋಲಿಸರು ಇಟ್ಟುಕೊಂಡಿದ್ದಾರೆ , ನನಗೆ ವಾಪಸ್ಸು ನೀಡಿರುವುದಿಲ್ಲ. ನನ್ನ ಮಗನ ಸಾವಿಗೆ ಆರೋಪಿತರು ಕಾರಣರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಗನ ಸಾವಿಗೂ ಆರೋಪಿತರಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.